ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 17 ಯೋಉಮಾ 2019

ಕರ್ನಾಟಕ ,ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 01-04-2019

**ಸುತ್ತೋಲೆ**

ವಿಷಯ: 2019-20 ರ ಸಾಲಿನ ಅನುದಾನ ವಿನಿಯೋಗ ಮತ್ತು ಎಸ್.ಸಿ.ಪಿ/ಟಿ.ಎಸ್.ಪಿ. ಬಾಬ್ತಿನ ಅನುದಾನ ಬಿಡುಗಡೆ ಕುರಿತು.

ಉಲ್ಲೇಖ:
1. ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಫ್‌ಡಿ/18 ಬಿಪಿಇ 2018, ದಿನಾಂಕ 19.03.2019.
2. ಸರ್ಕಾರದ ಅಧೀನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ರವರ ಅ.ಟಿ.ಸಂಖ್ಯೆ: ಸಕಇ 56 ಎಸ್‌ಎಲ್‌ಪಿ 2019, ದಿನಾಂಕ 16.03.2019.

–

2019-20ರ ಸಾಲಿನ ಉಲ್ಲೇಖ (1) ರನ್ವಯ ಆಯವ್ಯಯ ಹಂಚಿಕೆಯನ್ವಯ 31ನೇ ಜುಲೈ 2019ರವರೆಗೆ **ಮುಂದುವರೆದ ಹಾಗೂ ಅಭಿವೃದ್ಧಿ ಯೋಜನೆಗಳಿಗೆ** ಸಂಬಂಧಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಒಟ್ಟು ರಾಜಸ್ವ (Revenue) 3,65,970.48 ಲಕ್ಷ ಮತ್ತು ಬಂಡವಾಳ (Capital) ರೂ.1,30,172.69 ಲಕ್ಷ ಸೇರಿ ಒಟ್ಟು ರೂ.4,961.4317 ಕೋಟಿಗಳನ್ನು ವಿನಿಯೋಗಿಸಬಹುದಾಗಿದೆ. (ಉಲ್ಲೇಖ 1ರ ಪ್ರತಿ ಲಗತ್ತಿಸಿದೆ). ಅದರಂತೆ, ರಾಜ್ಯಮಟ್ಟದ ಎಲ್ಲಾ ಆಯುಕ್ತರುಗಳು/ ನಿರ್ದೇಶಕರುಗಳು ಮತ್ತು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು 2019-20ನೇ ಸಾಲಿನ ಆಯವ್ಯಯ ಹಂಚಿಕೆ ಮತ್ತು ಆಯವ್ಯಯದ ಲಿಂಕ್ ಪುಸ್ತಕದಲ್ಲಿ ಇರುವ ರೀತ್ಯಾ ಆಯಾ ಲೆಕ್ಕ ಶೀರ್ಷಿಕೆವಾರು ಉಲ್ಲೇಖದಲ್ಲಿನ ಮಿತಿಗಳಿಗೆ ಒಳಪಟ್ಟು ಅನುದಾನ ಬಿಡುಗಡೆ ಮಾಡಿ ನಿಯಾಮಾನುಸಾರ ವಿನಿಯೋಗಿಸಲು ಆದೇಶಿಸಿದೆ.

ಉಲ್ಲೇಖ (2)ರಲ್ಲಿ ಹೇಳಲಾದ ಸಮಾಜ ಕಲ್ಯಾಣ ಇಲಾಖೆಯ ಅನಧಿಕೃತ ಟಿಪ್ಪಣಿ ದಿನಾಂಕ 16.03.2019ರ ಸ್ವಯಂ ವೇದ್ಯ ಪ್ರತಿ ಅಡಕ ಮಾಡಿದೆ. ಅದರನ್ವಯ ಎಸ್.ಸಿ.ಪಿ/ಟಿ.ಎಸ್.ಪಿ. ಬಾಬ್ತು 2019-20ರ ಸಾಲಿನಲ್ಲಿ ಅನುದಾನ ಬಿಡುಗಡೆ ಮತ್ತು ವಿನಿಯೋಗಕ್ಕೆ ಈಗಾಗಲೇ ನಿಕಟ ಪೂರ್ಣ ಹಣಕಾಸು ವರ್ಷದಲ್ಲಿ ರಾಜ್ಯ ಪರಿಷತ್ ಅನುಮೋದಿಸಿರುವ ರೀತ್ಯಾ, ಆರ್ಥಿಕ ಇಲಾಖೆ ಮಾರ್ಗಸೂಚಿಗಳಂತೆ ಅನುದಾನ ಬಿಡುಗಡೆ ಮತ್ತು ವಿನಿಯೋಗ ಕುರಿತು ಆದ್ಯತೆ ಮೇಲೆ ಕ್ರಮ ಕೈಗೊಳ್ಳಲು ಆದೇಶಿಸಿದೆ.

ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ಲೆಕ್ಕಶೀರ್ಷಿಕೆವಾರು ಮತ್ತು ಯೋಜನಾವರು ರಾಜ್ಯ ಹಾಗೂ ಜಿಲ್ಲಾವಲಯಗಳಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ಆಯವ್ಯಯ ಹಂಚಿಕೆಯಂತೆ 2019-20ರ ಸಾಲಿಗೆ ಮುಂದುವರಿಸಿ ಆದೇಶ ಹೊರಡಿಸುವುದು.

(ಎಲ್.ಕೆ.ಅತೀಕ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1. ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಕೆ.ಎಚ್.ಬಿ, ಕಾಂಪ್ಲೆಕ್ಸ್, ಬೆಂಗಳೂರು-560009.
2. ಆಯುಕ್ತರು, ನರೇಗಾ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು.
3. ನಿರ್ದೇಶಕರು, ಪಂಚಾಯತ್ ರಾಜ್- 1/ಪಂಚಾಯತ್ ರಾಜ್-2/ಸ್ವ.ಉ.ಕಾ/ಗ್ರಾಮವಿಕಾಸ/ಯೋಉಮಾ-(ಪಿ.ಎಂ.ಐ.)/ ಇ-ಆಡಳಿತ/ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ ರಾಜ್ ಇಲಾಖೆ, ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

c3:Desktop/rdp 34 pmi 2018/01.04.2019

5. ಮುಖ್ಯ ಇಂಜಿನೀಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ/ಪಿಆರ್‌ಇಡಿ ಬೆಂಗಳೂರು.
6. ಎಲ್ಲಾ ಅಧೀಕ್ಷಕ ಅಭಿಯಂತರರುಗಳು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಪಿಆರ್‌ಇಡಿ (ರಸ್ತೆಗಳು), ಗ್ರಾಪಂ.ರಾಜ್ ಇಲಾಖೆ.
7. ಎಲ್ಲಾ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
8. ನಿರ್ದೇಶಕರು, ಇ-ಆಡಳಿತ (ಈ ಸುತ್ತೋಲೆ/ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರತಿಬಿಂಬಿಸಲು).
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

c3:Desktop/rdp 34 pmi 2018/01.04.2019